ತೆಗೆದುಕೊಳ್ಳುವುದಕ್ಕೆ ಬೇರೆ ಬೇರೆ ರೀತಿಯಲ್ಲಿ ಅಂದರೆ ಅರ್ಧಗಂಟೆ ಸಮಯಾವಧಿ ಚರ್ಚೆ ಮತ್ತು 68ರ ಕೆಳಗಡೆ ಬರತಕ್ಕಂಥ ಚರ್ಚೆಗೆ ಸಾಕಷ್ಟು ಅವಕಾಶವಿದೆ. ಅವುಗಳೆಲ್ಲಾ ಇರತಕ್ಕಂಥ ಸಂದರ್ಭದಲ್ಲಿ ನಾನು ಕೂಡ ನಮ್ಮ ಸದಸ್ಯರುಗಳೆಲ್ಲಾ ಓದಿ ಇವತ್ತು ಪ್ರಶ್ನೆಗಳನ್ನು ಕೇಳುತ್ತಿದ್ದರೆಂದು ತಿಳಿದುಕೊಂಡಿರುತ್ತೇನೆ. ಒಂದೇ ಸಾರಿ3-4 ಜನರು ಎದ್ದು ನಿಂತು ಈ ರೀತಿ ಕೇಳಿದರೆ ಮಾನ್ಯ ಅಧ್ಯಕ್ಷರಿಗೂ ಕಷ್ಟವಾಗುತ್ತದೆ, ಸರ್ಕಾರಕ್ಕೂ ಉತ್ತರ ಕೊಡುವುದಕ್ಕೆ ಕಷ್ಟವಾಗುತ್ತದೆ. ಅದನ್ನೆಲ್ಲಾ ಅರಿತು ಅವರ ಜೊತೆಯಲ್ಲು ಸಹಕರಿಸಬೇಕೆಂದು ನಾನು ತಮ್ಮ ಮೂಲಕ ಅವರಿಗ ಹೇಳಬಯಸುತ್ತೇನೆ. ತಾವು ಲಿಖಿತಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲು ಹೇಳಿದ್ದೀರಿ. ಅದರಂತೆ. . . . .

(ಗೊಂದಲ)

ಉಪಾಧ್ಯಕ್ಷಿಣಿಯವರು:- ಮಾನ್ಯ ಶಿವರಾಮೇಗೌಡರೇ, ಈಗ ಒಂದು ಗಂಟೆಕಾಲ ಪ್ರಶ್ನೋತ್ತರವೇಳೆ ಇರುತ್ತದೆ. ಆದಾದಮೇಲೆ ಮುಂದಿನ ವಿಷಯಕ್ಕೆ ಹೋಗಬೇಕಾಗಿದೆ.

ಶ್ರೀ ಎಂ.ಮಹದೇವ್:-ಮಾನ್ಯ ಅಧ್ಯಕ್ಷಿಣಿಯವರೇ, ನಿಯಮಾವಳಿಯ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿದರು. ಮತ್ತೆ ಪ್ರಶ್ನೆಯನ್ನು ಒಂದೇ ಸಲ ಕೇಳಬೇಕೆಂದೂ ಸಹ ಇದೆ. ಆದ್ದರಿಂದ ನಿಯಮಾವಳಿಯನ್ನು ತಿದ್ದುಪಡಿ ಮಾಡಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಲ್.ಆರ್.ಶಿವರಾಮೇಗೌಡ:- ಮಾನ್ಯ ಮಂತ್ರಿಗಳು ಒಂದು ಮಾತನ್ನು ಹೇಳಿದರು. ಈಗ ಮೂರು ದಿವಸಗಳಿಂದ ಪ್ರಶ್ನೆಗೆ ಉತ್ತರಗಳನ್ನು ನಿರೀಕ್ಷಣೆ ಮಾಡುತ್ತಿದ್ದೇನೆ. ನಮ್ಮ ಪ್ರಶ್ನೆಗಳು ಮೂರು ಮೂರು ಸಾರಿ ಸಭೆಯ ಮುಂದೆ ಬಂದರೂ ಉತ್ತರ ಕೊಡದೆ ಹೆಲ್ಡ್ ಓವರ್ ಆಗಿವೆ. ಮೂರು ದಿವಸಗಳಾದರೂ ಬರುವುದಿಲ್ಲ. ಮತ್ತೆ ಬೇರೆ ರೀತಿಯಲ್ಲೂ ಸದನದಲ್ಲಿ ಕೇಳುವುದಕ್ಕೆ ಅವಕಾಶವಿರುವುದಿಲ್ಲ. ಹೀಗಾದರೆ ನಾವು ಏನು ಮಾಡಬೇಕು?

ಶ್ರೀ ಜಿ.ಪುಟ್ಟಸ್ವಾಮಿಗೌಡ:- ನಿಯಮಾವಳಿಗಳಲ್ಲಿ ಸಾಕಷ್ಟು ಅವಕಾಶಗಳನ್ನು ಈಗಾಗಲೇ ಕಲ್ಪಿಸಿಕೊಡಲಾಗಿದೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ತೆಂಗು ಅಭಿವೃದ್ಧಿಗೆ ಪ್ರೋತ್ಸಾಹ ಧನ

442 (2127)ಶ್ರೀ ಜಿ.ಪಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ)

ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ತೆಂಗು ಅಭಿವೃದ್ಧಿ ಮಂಡಳಿಯವರು ತೆಂಗು ಅಭಿವೃದ್ಧಿ ಪ್ರೋತ್ಸಾಹ ಧನ ಹಾಗೂ ತೆಂಗಿನ ಅಣೆಗಳಿಗೆ ಧನ ಸಹಾಯ ಮಾಡುವುದ ನಿಜವೇ ;

ಆ) ಹಾಗಿದ್ದಲ್ಲಿ ಕಳೆದ ವರ್ಷ ಎಷ್ಟು ಎಕರೆಗಳಿಗೆ ತೆಂಗು ಅಭಿವೃದ್ಧಿ ಪ್ರೋತ್ಸಾಹ ಧನ ನಿಗದಿಯಾಗಿತ್ತು ಹಾಗು ಬಿಡುಗಡೆಯಾದ ಹಣವೆಷ್ಟು;

ಇ) ತೆಂಗಿನ ಅಣೆಗಳಿಗೆ ನಿಗದಿಯಾದ ಹಣ ಹಾಗೂ ಬಿಡುಗಡೆಯಾದ ಹಣವೆಷ್ಟು ;

ಈ) ತೆಂಗು ಅಭಿವೃದ್ಧಿ ವಿಸ್ತೀರ್ಣ (ಎಕರೆವಾರು) ಹೆಚ್ಚಿಸುವಲ್ಲಿ ಪ್ರಯತ್ನಿಸಲಾಗುವುದೇ ಹಾಗೂ ಎಕರೆಗೆ ಕೊಡುತ್ತಿರುವ ಮೊತ್ತವನ್ನು ಸಹ ಹೆಚ್ಚಿಸಲು ಪ್ರಯತ್ನಿಸಲಾಗುವುದೇ;

ಉ) ತೆಂಗಿನ ಅಣೆಗಳ ನಿರ್ಮಾಣ ಹೆಚ್ಚಾಗುವಂತೆ ಹಾಗೂ ಪ್ರತಿ ಅಣೆಗೆ ನಿಗದಿ ಮಾಡಿರುವ ಮೊತ್ತವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಎಂ.ಎಸ್.ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು)-

ಅ) ನಿಜ.

ಆ) ತೆಂಗು ಅಭಿವೃದ್ಧಿ ಮಂಡಳಿಯ ವರದಿ ರೀತ್ಯ 1560 ಎಕರೆಗೆ ಒಟ್ಟು ರೂ 13.22 ಲಕ್ಷ ಧನ ಸಹಾಯ ನೀಡಲಾಗಿದೆ.

ಇ) ತೆಂಗು ಅಭಿವೃದ್ಧಿ ಮಂಡಳಿಯು 1988-89 ರಲ್ಲಿ ಮಾತ್ರ ಒಂದು ವಿಶೇಷ ಯೋಜನೆಯಡಿ (ಬರಗಾಲ ಪೀಡಿತ ಸಲುವಾಗಿ) ತೆಂಗು ಅಣೆಗಳಿಗೆ ರೂ 10 ಲಕ್ಷ ಗಳನ್ನು ನಿಗದಿಪಡಿಸಿ ಅಷ್ಟೂ ಹಣವನ್ನು ಬಿಡುಗಡೆ ಮಾಡಿದೆ.

ಈ) ಹೌದು. ಈ ದಿಸೆಯಲ್ಲಿ ಕ್ರಮ ತೆಗೆದು ಕೊಳ್ಳಲಾಗಿದೆ.

ಉ) ಈ ಬಗ್ಗೆ ಯಾವುದೇ ಯೋಜನೆ ರಾಜ್ಯ ಸರ್ಕಾರದ ಮುಂದಿಲ್ಲ.

ಚರ್ಮದ ಹಾಗೂ ಎಲುಬು ಅಂಗಡಿಗಳಿಗೆ ಪರವಾನಿಗೆ

444 (2247)ಶ್ರೀ ಎಂ.ಮುನಿಸ್ವಾಮಿ (ಶಾಂತಿನಗರ)

ವಿಜ್ಞಾನ ಮತ್ತು ತಂತ್ರಜ್ಞಾನ, ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವರ ಜೀವನಹಳ್ಳಿ, ಶಾವುಪುರ, ಕಾಡುಗೊಂಡನಹಳ್ಳಿ ಮತ್ತು ವೆಂಕಟೇಶಪುರಗಳಲ್ಲಿ ಚರ್ಮ ಹದಮಾಡುವ ಮತ್ತು ಮೂಳೆ ಪುಡಿ ಮಾಡುವ ಮಳಿಗೆಗಳನ್ನು ಗುರುತಿಸಲಾಗಿದೆಯೇ ?

ಆ) ಈ ಮಳಿಗೆಗಳು ಯಾವಾಗಿನಿಂದ ಅಸ್ಥಿತ್ವಕ್ಕೆ ಬಂದಿರುತ್ತವೆ.

ಇ) ಇವುಗಳ ಮಾಲೀಕರು ಪರವಾನಗಿಯನ್ನು ಪಡೆದಿದ್ದಾರೆಯೇ, ಮತ್ತು ಈ ಪರವಾನಗಿಗಳು ಚಾಲ್ತಿಯಲ್ಲಿವೆಯೇ ?

ಈ) ಈ ಸಂಸ್ಥೆಗಳಿಂದ ಜನರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿರುವುದು ಗಮನಕ್ಕೆ ಬಂದಿದೆಯೇ ?

ಉ) ಈ ಪ್ರದೇಶಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಕಾರ್ಪೋರೇಷನ್ ವ್ಯಾಪ್ತಿಯಲ್ಲಿ ಬಂದಿರುವುದರಿಂದ ಈ ಸಂಸ್ಥೆಗಳನ್ನು ಸ್ಥಳಾಂತರಿಸುವ ಬಗ್ಗೆ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ ?

ಶ್ರೀ ಬಿ. ಬಸವಲಿಂಗಪ್ಪ (ವಿಜ್ಞಾನ ಮತ್ತು ತಂತ್ರಜ್ಞಾನ, ಜೀವಿಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆಯ ಸಚಿವರು.)-

ಅ) ಕಾಡುಗೊಂಡನಹಳ್ಳಿಯಲ್ಲಿ 14 ಚರ್ಮ ಹದ ಮಾಡುವ ಕೈಗಾರಿಕೆಗಳನ್ನು ಗಮನಿಸಲಾಗಿದೆ. ಮೂಳೆ ಪುಡಿ ಮಾಡುವ ಮಳಿಗೆಗಳು ಈ ಇಲಾಖೆಯ ಗಮನಕ್ಕೆ ಬಂದಿಲ್ಲ.

ಆ) ಮೇಲೆ ಹೇಳಿದಂತೆ ಚರ್ಮ ಹದ ಮಾಡುವ ಕೈಗಾರಿಕೆಗಳು 25-30ವರ್ಷಗಳಿಂದ ಅಸ್ಥಿತ್ವಕ್ಕೆ ಬಂದಿವೆ.

ಇ) ಚರ್ಮ ಹದ ಮಾಡುವ 7ಕೈಗಾರಿಕೆಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿಯು ಸಮ್ಮತಿ ಪತ್ರವನ್ನು ಪಡೆದಿರುತ್ತವೆ. (ಪರವಾನಗಿ ಪಡೆದಿರುವ ಉದ್ದಿಮೆಗಳ ಪಟ್ಟಿ ಲಗತ್ತಿಸಿದೆ)

ಈ) ಬಂದಿದೆ.